

# ಸೌಹಾರ್ದ

■ ಕೆ.ವಿ. ರಾಜಲಕ್ಷ್ಮಿ
ಕಲೆ: ಈಶ್ವರ್

‘ನಾಳೆ ಎಂಟು ಗಂಟೆಗೆ ನಮ್ಮ ಸೌಹಾರ್ದ ನಿಲಯಕ್ಕೆ ಬಸ್ ಬರುತ್ತೆ. ತಿಂಡಿ, ತೀರ್ಥ ಊಟ, ಮನರಂಜನೆ, ಕೊನೆಗೆ ವಾಪಸ್ ಇಲ್ಲಿಗೆ ಕರೆ ತರುವ ತನಕ ಎಲ್ಲ ಜವಾಬ್ದಾರಿ ಡೋನರ್ ವಹಿಸಿಕೊಂಡಿದ್ದಾರೆ. ಮೊದಲೇ ಹೇಳ್ತಿದ್ದೀವಿ, ಕಾಫಿ ಸರ್ವೀಸ್ ಏಳೂವರೆಗೆ ಕೊನೆಯಾಗುತ್ತೆ’ ಎಂದು ರಾತ್ರಿ ಡೈನಿಂಗ್ ಹಾಲ್‌ನಲ್ಲಿ ಮ್ಯಾನೇಜರ್ ಪ್ರಕಟಿಸಿದರು.

‘ದಾನಿಗಳ ಹೆಸರಲ್ಲಿ ವಿಶೇಷ ಭೋಜನದ ವ್ಯವಸ್ಥೆ ಸಾಮಾನ್ಯವಾಗಿದ್ದರೂ ತುಂಬಾ ದಿನಗಳಾಗಿತ್ತು ಈ ರೀತಿ ಹೊರಗಡೆ ಹೋಗಿ... ಅಲ್ವಾ ಶ್ಯಾಮೂ?’

ನೀಲಕಂಠನ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಹೋಗಲಿಲ್ಲ. ನೆಪಮಾತ್ರಕ್ಕೆ ಆಶ್ರಮದ ಅಂಗಳದಲ್ಲಿ ಹತ್ತು ನಿಮಿಷ ನಡೆದು, ‘ನಾಳೆ ತುರ್ತು ಕೆಲಸದ ಮೇಲೆ ಸಿಟಿಗೆ ಹೋಗಬೇಕು, ಕಾರ್ಯಕ್ರಮಕ್ಕೆ ಬರಲಾಗದು. ನಾನು ರೂಮಿಗೆ ಹೋಗ್ತೀನಿ. ನೀನು ಇನ್ನೊಂದು ಸ್ವಲ್ಪ ಹೊತ್ತು ವಾಕ್ ಮಾಡು’ ಎಂದವನೇ ನನ್ನ ರೂಮಿಗೆ ಬಂದು ಮಂಚದ ಮೇಲೆ ಮಲಗಿದೆ. ಯಾಕೋ ಸಮಾಧಾನವಾಗ್ತಿಲ್ಲ. ಏನೋ ದುಗುಡ, ಗೊಂದಲ.

ಹಾಗೆ ನೋಡಿದರೆ ಈ ವೃದ್ಧಾಶ್ರಮಕ್ಕೆ ನನ್ನ ಇಚ್ಛೆಯಿಂದಲೇ ಬಂದಿದ್ದು. ನನ್ನನ್ನು ಯಾರೂ ದಬ್ಬಿರಲಿಲ್ಲ. ಇಂದಿರೆ ಇರುವ ತನಕ ಕಷ್ಟ ತಿಳಿಯಲಿಲ್ಲ. ಅಕಾಲಿಕವಾಗಿ ಅವಳು ಅಗಲಿದಾಗ ತಾಪತ್ರಯ ಶುರುವಾಗಿತ್ತು. ವಿದೇಶದಲ್ಲಿದ್ದ ಮಗನ ಬಳಿ ಹೋಗಲಾರೆ, ಇಲ್ಲಿದ್ದವನಿಗೆ ಬೇಡವಾಗಿದ್ದೆ.

ಮಕ್ಕಳನ್ನು ಬೆಳೆಸುವಾಗ ನಾವು ಸಂಸ್ಕಾರ ಕಲಿಸಲಿಲ್ಲವೇ?

ಅಟ್ಟ ಹತ್ತಿದ ಮೇಲೆ ಏಣಿ ಭಾರ ಅನ್ನುವಂತಾಗಿತ್ತು ನನ್ನ ಸ್ಥಿತಿ. ಒಂಟಿಯಾಗಿ ಮನೆಯಲ್ಲಿ ಇರುವುದು ಅಸಹನೀಯವಾದಾಗ ಈ ಆಶ್ರಮಕ್ಕೆ ಬಂದಿದ್ದೆ. ಇದೇನೂ ಉಚಿತ ಧಾಮವಲ್ಲ. ಒಳ್ಳೆಯ ಸೌಕರ್ಯವಿತ್ತು. ನಾನು ಇಂಡಿಪೆಂಡೆಂಟ್ ರೂಮ್ ಆಯ್ಕೆ ಮಾಡಿಕೊಂಡಿದ್ದೆ. ಪುಟ್ಟ ವಾಚನಾಲಯ, ಆವರಣದ ಒಳಗೇ ನಿರ್ಮಿಸಿದ್ದ ಪಾರ್ಕ್ ಆಹ್ಲಾದಕರವಾಗಿತ್ತು.

ಮಕ್ಕಳಿಗೆ ‘ನಾನು ಶಿಫ್ಟ್ ಆಗಿದ್ದೇನೆ’ ಎಂದು ವಿಷಯ ತಿಳಿಸಿದ್ದೆನೇ ಹೊರತು ಹೊಸ ವಿಳಾಸ ತಿಳಿಸಿರಲಿಲ್ಲ. ‘ಒಳ್ಳೆಯದಾಯಿತು’ ಎನ್ನುವ ಅರ್ಥದ ಮರು ಸಂದೇಶ ಇಬ್ಬರಿಂದಲೂ. ಅಲ್ಲಿಗೆ ಎಲ್ಲವೂ ಮುಗಿದಿತ್ತು.

***

‘ನಮಗೆಲ್ಲ ರಾಜೋಪಚಾರ, ಮಗುವಿನ ಮೂರನೇ ವರ್ಷದ ಹುಟ್ಟಿದ ಹಬ್ಬವಂತೆ. ಸಂಸ್ಕಾರವಂತರು. ತುಂಬಾ ಗೌರವದಿಂದ ಕಂಡರು. ಎಲ್ಲರಿಗೂ ಫ್ಲಾಸ್ಕ್ ಉಡುಗೊರೆಯಾಗಿ ಕೊಟ್ಟರು. ನೀನೂ ಬರ್ಬೇಕಿತ್ತು, ಸಂತೋಷವಾಗ್ತಿತ್ತು’ ನೀಲಕಂಠ ಒಂದೇ ಸಮನೆ ಬಡಬಡಿಸಿದ.

‘ಆ ಮಗುವಿನ ತಾತ ನಾನೇ’ ಎಂದು ಹೇಳಿ ಕಹಿ ಉಗುಳುವುದು ಬೇಡ ಅನ್ನಿಸಿ ಶುಷ್ಕ ನಗೆ ನಕ್ಕೆ.

ಪ್ರತಿಕ್ರಿಯಿಸಿ: feedback@sudha.co.in